# ನಿಮ್ಮೊಡನೆ

## ಮಾತೃಭಾಷೆಯ ಮಹತ್ವ

‘ಕನ್ನಡ ಶಾಲೆಗಳಲ್ಲಿ ಕಲಿತ ಮಕ್ಕಳಿಗಿಂತ ಇಂಗ್ಲಿಷ್ ಶಾಲೆಯಲ್ಲಿ ಕಲಿತ ಮಕ್ಕಳು ಹೆಚ್ಚು ಹಾಗೂ ಬೇಗ ಬುದ್ಧಿವಂತರಾಗುತ್ತಾರೆ’ ಎನ್ನುವ ಹುಸಿನಂಬಿಕೆ ಪೋಷಕರಲ್ಲಿ ಹುಟ್ಟಲು ಶಿಕ್ಷಣ ಕ್ಷೇತ್ರದಲ್ಲಿ ಸರಕಾರ ತೋರಿರುವ ವೈಫಲ್ಯವೇ ಮುಖ್ಯ ಕಾರಣ. ಕನ್ನಡ ಶಾಲೆಗಳಲ್ಲಿ ಎಲ್ಲ ಮೂಲಸೌಕರ್ಯಗಳೂ ಇದ್ದು, ಇಂಗ್ಲಿಷನ್ನು ಭಾಷೆಯಾಗಿ ಕಲಿಸುವ ಉತ್ತಮ ವ್ಯವಸ್ಥೆ ಮಾಡಿದರೆ ಬಹುತೇಕ ಪೋಷಕರು ಈಗಿರುವ ಖಾಸಗಿ ‘ಇಂಗ್ಲಿಷ್ ಸುಲಿಗೆ ಶಾಲೆ’ಗಳತ್ತ ಮುಖ ಹಾಕುವುದೇ ಇಲ್ಲ.



ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಇಲಾಖೆಯು ‘ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯಲ್ಲೇ ಶಿಕ್ಷಣ ಒದಗಿಸಲು ಸೂಕ್ತ ಕ್ರಮ ಕೈಗೊಳ್ಳಿ’ ಎಂದು ರಾಜ್ಯ ಸರಕಾರಗಳಿಗೆ ಸುತ್ತೋಲೆ ಕಳುಹಿಸಿ ಸೂಚಿಸಿದೆ. ಅದೇ ವೇಳೆಗೆ ಇಲ್ಲಿ ನಮ್ಮ ರಾಜ್ಯ ಸರಕಾರ ‘ಹೋಬಳಿಗೊಂದು ಇಂಗ್ಲಿಷ್ ಶಾಲೆ’ ತೆರೆಯಲು ಹೊರಟಿದೆ! ಶಿಕ್ಷಣವು ಕೇಂದ್ರ ಮತ್ತು ರಾಜ್ಯ ಸರಕಾರಗಳ ಜಂಟಿ ಪಟ್ಟಿಯಲ್ಲಿ ಬರುವ ವಿಷಯವಾದ್ದರಿಂದ ರಾಜ್ಯ ಸರಕಾರಗಳಿಗೆ ಕೇಂದ್ರವು ಸಲಹೆಯ ಮಾದರಿಯ ಸುತ್ತೋಲೆ ಕಳುಹಿಸಿರುವುದು ಸರಿಯಾಗಿಯೇ ಇದೆ. ಮೇಲಾಗಿ ಜಗತ್ತಿನಾದ್ಯಂತ ಶಿಕ್ಷಣ ತಜ್ಞರು, ಮಾತೃಭಾಷೆಯೇ ಶಿಕ್ಷಣ ಮಾಧ್ಯಮವಾಗುವುದರ ಒಳಿತುಗಳನ್ನು ಖಚಿತವಾಗಿಯೇ ಗುರುತಿಸಿದ್ದಾರೆ. ಯಾವ ವಿಷಯವನ್ನೇ ಆಗಲಿ, ಆಯಾ ಪರಿಸರದ ಭಾಷೆಯಲ್ಲಿ ಕಲಿಸಿದರೆ ಮಕ್ಕಳಿಗೆ ವಿಷಯದ ಗ್ರಹಿಕೆಗೆ ಸುಲಭವಾಗುತ್ತದೆ. ತಮ್ಮದಲ್ಲದ ಭಾಷೆಯಲ್ಲಿ ಕಲಿಕೆಗೆ ತೊಡಗಿದರೆ, ಮೊದಲು ಆ ಪರಭಾಷೆಯನ್ನು ಗ್ರಹಿಸುವ ಹಾಗೂ ಆ ಬಳಿಕ ವಿಷಯವನ್ನು ಸಂಗ್ರಹಿಸುವ ಸಂಕಷ್ಟಕ್ಕೆ ವಿದ್ಯಾರ್ಥಿಗಳು ಒಳಗಾಗಬೇಕು ಎನ್ನುವುದು ತಜ್ಞರು ಕಂಡುಕೊಂಡಿರುವ ಸತ್ಯ. ಕರ್ನಾಟಕದ ಆಳುವವರಿಗೆ ಈ ಸತ್ಯ ಗೊತ್ತಿಲ್ಲದ್ದೇನಲ್ಲ. ಹಾಗಿದ್ದೂ ಇಂಗ್ಲಿಷ್ ಮಾಧ್ಯಮದ ಶಾಲೆಗಳನ್ನು ಮುದ್ದಿಸುವ ಕೆಲಸ ನಮ್ಮಲ್ಲಿ ನಿರಂತರವಾಗಿ ನಡೆಯುತ್ತಲೇ ಇದೆ. ಇದಕ್ಕೆ ನಮ್ಮ ವಿದ್ಯಾರ್ಥಿಗಳ ಪೋಷಕರೂ ತಮ್ಮ ಕೈಲಾದ ನೆರವು ನೀಡುತ್ತಿದ್ದಾರೆ.

ಮಾಧ್ಯಮವಾಗಿ ಇಂಗ್ಲಿಷ್ ಮತ್ತು ಭಾಷೆಯಾಗಿ ಇಂಗ್ಲಿಷ್ ಕಲಿಯುವ ವಿಷಯದಲ್ಲಿ ಪೋಷಕರಲ್ಲಿ ಸಾಕಷ್ಟು ಗೊಂದಲಗಳಿವೆ. ಭಾಷೆಯಾಗಿ ಇಂಗ್ಲಿಷ್ ಕಲಿಯುವುದರ ಬಗ್ಗೆ ಯಾರ ಆಕ್ಷೇಪವೂ ಇಲ್ಲ. ಆದರೆ ‘ನೀರಿಳಿಯದ ಗಂಟಲಲ್ಲಿ ಕಡುಬು ತುರುಕಿದಂತೆ’ ಪ್ರತಿಯೊಂದು ವಿಷಯವನ್ನೂ ಪ್ರಾಥಮಿಕ ಹಂತದಲ್ಲಿ ಇಂಗ್ಲಿಷ್ ಮೂಲಕ ಕಲಿಸುವುದು ಸರಿಯಲ್ಲ ಎನ್ನುವುದೇ ಆಕ್ಷೇಪ. ಈ ಗೊಂದಲವನ್ನು ನಿವಾರಿಸುವಲ್ಲಿ ಮಹತ್ವದ ಪಾತ್ರ ವಹಿಸಬೇಕಾದ ಸರಕಾರವೇ ವೃಥಾ ಗೊಂದಲದಲ್ಲಿ ಮುಳುಗಿದೆ. ಸರಕಾರಿ ಶಾಲೆಗಳ ಕಳಪೆ ನಿರ್ವಹಣೆ ಮತ್ತು ಮೂಲಸೌಕರ್ಯಗಳ ಕೊರತೆ ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ಬಹುದೊಡ್ಡ ಚಿಂತೆಯ ವಿಷಯವಾಗಿರುವುದು ನಿಜ. ಆ ಹಿನ್ನೆಲೆಯಲ್ಲಿಯೇ ಠಾಕುಠೀಕಾಗಿ ಕಾಣುವ ಇಂಗ್ಲಿಷ್ ಶಾಲೆಗಳತ್ತ ಪೋಷಕರು ತಮ್ಮ ಮಕ್ಕಳ ಸಮೇತ ದೌಡಾಯಿಸುವುದು. ಅಲ್ಲಿ ಶುಲ್ಕ ಕಟ್ಟುವ ಸಂಕಷ್ಟ ಎಷ್ಟೇ ಇದ್ದರೂ ಅದನ್ನು ಪ್ರತಿಷ್ಠೆಯ ವಿಷಯವೆಂಬಂತೆ ಪರಿಗಣಿಸಿರುವುದು. ‘ಕನ್ನಡ ಶಾಲೆಗಳಲ್ಲಿ ಕಲಿತ ಮಕ್ಕಳಿಗಿಂತ ಇಂಗ್ಲಿಷ್ ಶಾಲೆಯಲ್ಲಿ ಕಲಿತ ಮಕ್ಕಳು ಹೆಚ್ಚು ಹಾಗೂ ಬೇಗ ಬುದ್ಧಿವಂತರಾಗುತ್ತಾರೆ’ ಎನ್ನುವ ಹುಸಿನಂಬಿಕೆ ಪೋಷಕರಲ್ಲಿ ಹುಟ್ಟಲು ಶಿಕ್ಷಣ ಕ್ಷೇತ್ರದಲ್ಲಿ ಸರಕಾರ ತೋರಿರುವ ವೈಫಲ್ಯವೇ ಮುಖ್ಯ ಕಾರಣ. ಕನ್ನಡ ಶಾಲೆಗಳಲ್ಲಿ ಎಲ್ಲ ಮೂಲಸೌಕರ್ಯಗಳೂ ಇದ್ದು, ಇಂಗ್ಲಿಷನ್ನು ಭಾಷೆಯಾಗಿ ಕಲಿಸುವ ಉತ್ತಮ ವ್ಯವಸ್ಥೆ ಮಾಡಿದರೆ ಬಹುತೇಕ ಪೋಷಕರು ಈಗಿರುವ ಖಾಸಗಿ ಇಂಗ್ಲಿಷ್ ಶಾಲೆಗಳತ್ತ ಮುಖ ಹಾಕುವುದೇ ಇಲ್ಲ.

ಖಾಸಗಿ ಇಂಗ್ಲಿಷ್ ಶಾಲೆಗಳದ್ದು ದುಬಾರಿ ಶಿಕ್ಷಣ ಮಾತ್ರವಲ್ಲ, ಹುಸಿ ಪ್ರತಿಷ್ಠೆಯ ಶಿಕ್ಷಣವೂ ಹೌದು. ನಾಯಿಕೊಡೆಗಳಂತೆ ತಲೆ ಎತ್ತಿರುವ ಖಾಸಗಿ ಇಂಗ್ಲಿಷ್ ಶಾಲೆಗಳು ವಿವಿಧ ಶುಲ್ಕಗಳ ಮೂಲಕ ಪೋಷಕರನ್ನು ಸುಲಿಯುವ ಕೆಲಸವನ್ನು ಹಲವಾರು ವರ್ಷಗಳಿಂದ ಮಾಡುತ್ತಿರುವುದನ್ನು ತಡೆಯದೆ, ರಾಜ್ಯ ಸರಕಾರ ಕಣ್ಣು ಮುಚ್ಚಿಕೊಂಡು ಕುಳಿತಿದೆ. ಹಲವಾರು ರಾಜಕಾರಣಿಗಳೇ ಈ ‘ಇಂಗ್ಲಿಷ್ ಸುಲಿಗೆ’ಯಲ್ಲಿ ತೊಡಗಿರುವುದರಿಂದ ಸರಕಾರದ ಜತೆಗೆ ಅಪವಿತ್ರ ಮೈತ್ರಿಯೂ ಏರ್ಪಟ್ಟಿದೆ. ಇದರಿಂದಾಗಿ ಶಿಕ್ಷಣ ಕ್ಷೇತ್ರದಲ್ಲಿ ಬಡವರು ಮತ್ತು ಶ್ರೀಮಂತರ ನಡುವಣ ಅಂತರವೂ ಹೆಚ್ಚಾಗಿದೆ. ಮಾತೃಭಾಷೆಯ ಮಾಧ್ಯಮದಲ್ಲಿ ಶಿಕ್ಷಣ ಪಡೆಯುವವರೆಲ್ಲ ಹಳ್ಳಿಗರು ಮತ್ತು ಬಡವರು; ಇಂಗ್ಲಿಷ್ ಶಿಕ್ಷಣ ಪಡೆಯುವವರೆಲ್ಲ ಶ್ರೀಮಂತರು ಎಂಬ ಕಂದರವೂ ಉಂಟಾಗಿದೆ. ಎಳವೆಯಲ್ಲೇ ಸಮಾನತೆಯ ಪ್ರಾಯೋಗಿಕ ಶಿಕ್ಷಣ ಪಡೆಯಬೇಕಾದ ಮಕ್ಕಳು ಇಂಗ್ಲಿಷಿನ ಹುಸಿಪ್ರತಿಷ್ಠೆಯನ್ನೇ ಸತ್ಯ ಎಂದು ನಂಬುವ ಸ್ಥಿತಿ ಉಂಟಾಗಿದೆ.

ಕೇವಲ ಇಂಗ್ಲಿಷ್ ಮಾಧ್ಯಮದಲ್ಲಿ ಕಲಿತವರಿಗೆ ಮಾತ್ರ ಹೆಚ್ಚು ಸಂಬಳ ಬರುವ ದೊಡ್ಡ ಉದ್ಯೋಗ ಸಿಕ್ಕಿದೆ ಎನ್ನುವುದೂ ಹುರುಳಿಲ್ಲದ ಮಾತು. ಕನ್ನಡ ಮಾಧ್ಯಮದಲ್ಲಿ ಕಲಿತು ಬೆಂಗಳೂರಿನ ಮಾಹಿತಿ–ತಂತ್ರಜ್ಞಾನ ಕಂಪೆನಿಗಳಲ್ಲಿ ದೊಡ್ಡ ಹುದ್ದೆಗಳನ್ನು ನಿಭಾಯಿಸುತ್ತಿರುವ ಸಾವಿರಾರು ಜನರಿದ್ದಾರೆ. ಹಾಗೆಯೇ ಮಾತೃಭಾಷೆಯ ಮಾಧ್ಯಮದಲ್ಲಿ ಶಿಕ್ಷಣ ಪಡೆದು ಆಡಳಿತ, ಹಣಕಾಸು, ಮಾರುಕಟ್ಟೆ, ಕಾನೂನು, ಆರೋಗ್ಯ ಮುಂತಾದ ಕ್ಷೇತ್ರಗಳಲ್ಲೂ ಉನ್ನತ ಹುದ್ದೆಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿರುವ ಸಾವಿರಾರು ಗಣ್ಯರೂ ಇದ್ದಾರೆ. ಪೋಷಕರಲ್ಲಿ ಗಟ್ಟಿಯಾಗಿ ಬೇರೂರಿರುವ ಇಂಗ್ಲಿಷ್ ಮಾಧ್ಯಮದ ಹುಸಿ ನಂಬಿಕೆಯನ್ನು ಹೋಗಲಾಡಿಸುವ ರಾಜಕೀಯ ಇಚ್ಛಾಶಕ್ತಿಯನ್ನು ರಾಜ್ಯ ಸರಕಾರ ಮೊದಲು ಪ್ರದರ್ಶಿಸಬೇಕು.

■ ಬಿ.ಎಂ.ಹನೀಫ್